## ಗಮನ ಸೆಳೆಯುವ ಸೂಚನೆಗಳು

### ೧ ಮೈಸೂರು ನಂಜನಗೂಡಿನ ಮಧ್ಯೆ ಹಾದುಹೋಗುವ ಮೈಸೂರು—ಊಟಿ ರಸ್ತೆಗೆ ಸಂಬಧಿಸಿದಂತೆ ಜೋಡಿ ರಸ್ತೆಯನ್ನು ಕಾರ್ಯಗತಮಾಡುವುದು

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಸಭಾಧ್ಯಕ್ಷರೇ, ಮೈಸೂರು ನಂಜನಗೂಡಿನ ಮಧ್ಯೆ(ಮೈಸೂರು–ಊಟಿರಸ್ತೆ)ಜೋಡಿ ರಸ್ತೆ ಕಾರ್ಯಗತವಾಗದೇ ಇರುವದರಿಂದ ಅನೇಕ ಅಪಘಾತ ಗಳು ನಡಿಯುತ್ತಿದ್ದು, ದಿನಾಂಕ ೨೩–೮–೧೯೮೭ ರಂದು ಲಾರಿಯೊಂದು ನಂಜನಗೂಡಿನ ಮನೆ ಯೊಂದಕ್ಕೆ ನುಗ್ಗಿ ಮೂರು ಜನರು ಮೃತರಾಗಿರುವ ಬಗ್ಗೆ ಇವರ ಕುಟುಂಬದವರಿಗೆ ಪರಿಹಾರ ಒದಗಿಸಿ ಕೊಡುವುದು ಹಾಗೂ ಜೋಡಿರಸ್ತೆಯ ನಿರ್ಮಾಣ ಹಂತದ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ, ಮೊನ್ನೆಯ ದಿವಸವು ಅಲ್ಲಿ ಎರಡು ಆಕ್ಸಿಡೆಂಟ್‌ಗಳು ಆಗಿವೆ.

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಖಾತೆಯ ಸಚಿವರು).—ಮಾನ್ಯ ವಿರೋಧ ಪಕ್ಷದ ನಾಯಕಿಯವರು ತಂದಿರತಕ್ಕಂತ ಗಮನ ಸೆಳೆಯುವ ಸೂಚನೆಯ ಬಗ್ಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಮೈಸೂರಿನಿಂದ ನಂಜನಗೂಡಿಗೆ ಅಂತರ ೨೦. ಕಿ. ಮೀ. ಈ ಭಾಗದ ಕ್ಯಾರೇಜ್‌ವೇ ೭.೦೦ ಮೀಟರ್ ಮತ್ತು ರಸ್ತೆ ಅಗಲ ೧೦ ಮೀಟರ್(ಫಾರ್‌ಮೇಶನ್)ಇರುತ್ತದೆ. ಇಲ್ಲಿಂದ ನಂಜನಗೂಡು ತಾಲ್ಲೂಕು ಗಡಿಯವರೆಗೆ ಅಂತರ ೧೪.೨೦ ಕಿ. ಮೀ. ಈ ಭಾಗದಲ್ಲಿ ೧೬೧ ಕಿ. ಮೀ. ಇಂದ ೧೬೨.೫ ಕಿ. ಮೀ. ವರೆವಿಗೆ ಕ್ಯಾರೇಜ್‌ವೇ ೭.೦೦ ಮೀಟರ್ ಮತ್ತು ೧೬೨.೫ ಕಿ. ಮೀ. ಇಂದ ತಾಲ್ಲೂಕು ಗಡಿಯವರೆವಿಗೆ ಕ್ಯಾರೇಜ್‌ವೇ ೫ ಮೀಟರ್‌ನಿಂದ ೭.೦೦ ಮೀಟರ್ ವರೆವಿಗೆ ಇರುತ್ತದೆ, ಮತ್ತು ರಸ್ತೆ ಅಗಲ (ಫಾರ್‌ಮೇಶನ್)೧೦ ಮೀಟರ್ ಮತ್ತು ಅದಕ್ಕಿಂತ ಹೆಚ್ಚಾಗಿ ಇರುತ್ತದೆ.

ದಿನಾಂಕ ೨೩–೮–೮೭ರಂದು ನಡೆದ ಅಪಘಾತ ೧೬೨.೫೮ ಕಿ. ಮೀ. ನಲ್ಲಿ ಆಗಿದ್ದು ಇದರಲ್ಲಿ ಲಾರಿಯು ಒಂದು ವಾಸದ ಮನೆಗೆ ನುಗ್ಗಿ ಮನೆ ಕುಸಿದು ೩ ಜನ ಮೃತಪಟ್ಟು ೬ ಜನಕ್ಕೆ ಗಾಯಗಳಾದುವು. ಮೇಲ್ಕಂಡ ಅಪಘಾತ ನಡೆದ ಸ್ಥಳದಲ್ಲಿ ಕಾರೇಜ್‌ವೇ ೬.೩೦ ಮೀಟರ್ (ಅಂದರೆ ಮಧ್ಯದಲ್ಲಿ ಕಾಂಕ್ರಿಟ್ ೩. ೬ ಮೀಟರ್ ಕಾಂಕ್ರಿಟ್ ಕೊನೆಯಲ್ಲಿ ಡಾಂಬರ್ ರಸ್ತೆ ೧.೩೫ ಮೀಟರ್) ಇರುತ್ತದೆ ಮತ್ತು ರಸ್ತೆ ಅಗಲ ೧೦ ಮೀಟರ್ ಇರುತ್ತದೆ. ರಸ್ತೆ ಮಧ್ಯ ಭಾಗದಿಂದ ಮನೆಯವರಿಗೆ ೧೫ ಮೀಟರ್ ಅಂತರವಿದ್ದು, ಈ ಜಾಗವು ಊಟಿ ಕಡೆಯಿಂದ ಬರುವಾಗ ಸುಲಲಿತವಾದ ತಿರುವಿನ ಕೆಳಭಾಗದಲ್ಲಿರುತ್ತದೆ. ಈ ರಸ್ತೆಯಲ್ಲಿ ಈಗಾಗಲೇ ಕಬಿನಿ ಸೇತುವೆಯಿಂದ(೧೬೦.೫ ರಿಂದ ೧೬೨.೫ಕಿ. ಮಿ) ೨ ಕಿ.ಮಿ.ರಸ್ತೆಯ ಕ್ಯಾರೇಜ್‌ವೇ ೭.೦೦ ಮೀಟರ್ ಇರುತ್ತದೆ. ಉಳಿದರಸ್ತೆ ಉದ್ದ ೧೬೨.೫ರಿಂದ೧೬೪. ೩೦ರವರೆಗೆ ಕ್ಯಾರೇಜ್‌ವೇ ೫.೦೦ ಮೀಟರ್ ಮತ್ತು ಅದಕ್ಕೆ ಹೆಚ್ಚಾಗಿ ಇರುತ್ತದೆ. ಮತ್ತು ರಸ್ತೆ ಅಗಲ ೧೦ ಮೀಟರ್(ಫಾರ್‌ಮೇಶನ್))ಇರುತ್ತದೆ. ಈ ಭಾಗದಲ್ಲಿ(ಅಂದರೆ ಬೆಂಗಳೂರಿನಿಂದ ಊಟಿಗೆ ಹೋಗುವಾಗ)ಯಾವ ಅಪಾಯಕಾರಿ ತಿರುವು ಇರುವುದಿಲ್ಲ. ಹಾಗೂ ರಸ್ತೆ ಒಳಭಾಗದಲ್ಲಿ(ಲೋಕೋಪ ಯೋಗಿ ಇಲಾಖೆ ವಸತಿ ಗೃಹ ಬಿಟ್ಟು ಯಾವ ವಸತಿ ಗೃಹಗಳು ಇರುವುದಿಲ್ಲ. ಮತ್ತು ರಸ್ತೆ ಅಗಲ ೧೦ ಮೀಟರ್ ಇರುವುದರಿಂದ ದ್ವಿಮುಖವಾಗಿ ಭಾರಿ ವಾಹನ ಚಲಿಸಲು ಯಾವ ಅನಾನುಕೂಲ ಅಡಚಣೆ ಇರುವುದಿಲ್ಲ.

ಮೇಲ್ಕಂಡ ಜಾಗದಲ್ಲಿ ರಸ್ತೆಯನ್ನು ಪರಿಶೀಲಿಸಿದಾಗ ದಿನಾಂಕ ೨೩–೮–೮೭ರಂದು ಆದ ಅಪಘಾತವು ರಸ್ತೆಯ ರಚನೆ ಇಂದ ಆಗಿರುವುದಿಲ್ಲವೆಂದು ಕಂಡುಬರುತ್ತದೆ.

ಮೈಸೂರು ಮತ್ತು ನಂಜನಗೂಡು ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ಮೈಸೂರಿನಿಂದ ನಂಜನ–ಗೂಡಿನವರೆಗೆ ೨೦ ಕಿ. ಮೀ. ಉದ್ದ, ೭ ಮೀಟರ್ ಅಗಲ ಕ್ಯಾರೇಜ್‌ವೇ ಇದೆ. ಇದು ರಾಜ್ಯ ಹೆದ್ದಾ ರಿಗಳ ಸ್ಟಾಂಡರ್ಡ್‌ಗಳಿಗೆ ಅನುಗುಣವಾಗಿದೆ. ಈ ಭಾಗವನ್ನು ಜೋಡಿ ರಸ್ತೆಯಾಗಿ ಪರಿವರ್ತಿಸಬೇಕಾ ದರೆ ಭೂಸ್ವಾಧೀನ ಪಡಿಸಿಕೊಳ್ಳಬೇಕಾಗುತ್ತದೆ ಮತ್ತು ಕೆರೆಯ ಏರಿಯಮೇಲೆ ಎತ್ತರದ ಎಂಬ್ಯಾಲಿಕ್ ಮೆಂಟ್‌ಗಳನ್ನು ಸಹ ಒದಗಿಸಬೇಕಾಗುತ್ತದೆ. ಹೀಗೆ ೨೦ ಕಿ. ಮೀ ಉದ್ದ ಮೈಸೂರಿನಿಂದ ನಂಜನ ಗೂಡಿನವರೆಗೆ ಜೋಡಿ ರಸ್ತೆಯನ್ನು ಮಾಡಲು ಸುಮಾರು ೨ ಕೋಟಿ ರೂಗಳು ಬೇಕಾಗುತ್ತದೆ. ಮೈಸೂರು ಮತ್ತು ನಂಜನಗೂಡುಗಳ ಮಧ್ಯೆ ಜೋಡಿ ರಸ್ತೆಯನ್ನು ಮಾಡುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

†ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ. ಎರಡು ಕೋಟಿ ರೂಪಾಯಿಗಳು ಈ ರಸ್ತೆಗಳನ್ನು ಮಾಡುವುದಕ್ಕೆ ಬೇಕಾಗುವುದರಿಂದ ಈಗ ಇದನ್ನೂ ಮಾಡುವುದಕ್ಕಾಗುವುದಿಲ್ಲ ಎಂದರೆ, ಇವರಿಗೆ ನಾನು ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ಅಲ್ಲಿ ಆಕ್ಸಿಡೆಂಟ್‌ಗಳು ಆಗುವುದಿಲ್ಲ ವಾದ್ದರಿಂದ ರಸ್ತೆಗಳು ಈಗಿರುವಷ್ಟೇ ಸಾಕು ಎಂದು ಹೇಳುತ್ತಿದ್ದಾರೆ. ಇವರು ನಂಜನಗೂಡಿನ ಕಡೆಗೆ ಬರುವುದಿಲ್ಲವಾದ್ದರಿಂದ ಅಲ್ಲಿನ ರಸ್ತೆಗಳು ಇವರಿಗೆ ಬೇಕಾಗಿಲ್ಲ. ಹಾಸನದ ಕಡೆ ಇವರು ಹೋಗುವುದರಿಂದ ಅಲ್ಲಿಗೆ ಮಾತ್ರ ರಸ್ತೆಗಳು ಚೆನ್ನಾಗಿರಬೇಕು. ಹಿಂದೆ ಮಾನ್ಯ ಸದಸ್ಯರಾಗಿದ್ದ ಮಹದೇವ್‌ರವರು ಈ ಜಾಗದಲ್ಲಿ ಆಕ್ಸಿಡೆಂಟ್‌ಗಳು ಆಗುವುದರಿಂದ ರಸ್ತೆಗಳನ್ನು ಜೋಡಿ ರಸ್ತೆ ಮಾಡಬೇಕೆಂದು ಪದೇ ಪದೇ ಕೇಳುತ್ತಿದ್ದರು. ಈ ರಸ್ತೆ ಹೋಗುವ ಜಾಗದಲ್ಲಿ ಸುಜಾತ ರೈಸ್ ಮಿಲ್ ಇದೆ. ಅದರ ಕಾರ್ಮಿಕರು ಹಗಲೂ ರಾತ್ರಿ ಓಡಾಡುತ್ತಿರುತ್ತಾರೆ, ರೈಲ್ವೆ ನಿಲ್ದಾಣ ಇದೆ, ತಾಲ್ಲೂಕು ಕಚೇರಿ ಇದೆ, ತಾಲ್ಲೂಕು ಅಭಿವೃದ್ಧಿ ಮಂಡಳಿ ಕಚೇರಿ ಇದೆ, ಜೂನಿಯರ್ ಕಾಲೇಜ್ ಇದೆ, ಪ್ರೌಢ ಶಾಲೆ ಇದೆ, ಹಾಸ್ಟೆಲ್‌ಗಳು ಇವೆ. ಮಕ್ಕಳ ಕಾನ್ವೆಂಟ್ ಇದೆ. ಇಷ್ಟೆಲ್ಲಾ ಇರುವಾಗ ಅಲ್ಲಿ ರಸ್ತೆ ಮಾಡುವ ಅವಶ್ಯಕತೆ ಇಲ್ಲವೆಂದರೆ ಹೇಗೆ? ಹಾಸನಕ್ಕೆ ಇವರು ಹೋಗುವ ರಸ್ತೆ ಮಾತ್ರ ಚೆನ್ನಾಗಿದ್ದರೆ ಸಾಕೆ? ಇದು ಯಾವ ನ್ಯಾಯ? ಈ ರಸ್ತೆಯಲ್ಲಿ ವಾರಕ್ಕೆ ಒಂದಾದರೂ ಆಕ್ಸಿಡೆಂಟ್ ಆಗುತ್ತಾ ಇರುತ್ತದೆ. ಈ ರಸ್ತೆಯ ಪಕ್ಕದಲ್ಲಿ ವಾಹನಗಳು ಜಾರಿಕೊಂಡು ಹೋಗಿ ಬಿಡುತ್ತವೆ. ಬೇಕಾದರೆ ಅಂಕಿ ಅಂಶಗಳನ್ನು ತೆಗೆಸಿ ನೋಡಿ ಇದುವರೆಗೆ ಇಷ್ಟು ಆಕ್ಸಿಡೆಂಟ್ ಆಗಿದೆ ಎಂಬುದು ಗೊತ್ತಾಗುತ್ತದೆ. ಈ ರಸ್ತೆ ಮಾಡಬೇಕಾದರೆ ಎರಡು ಕೋಟಿ ರೂಪಾಯಿಗಳು ಬೇಕಾಗುವುದರಿಂದ ಈಗ ರಸ್ತೆಯನ್ನು ಮಾಡುವುದಕ್ಕಾಗುವುದಿಲ್ಲ ಎನ್ನುವುದು ಸರಿಯಲ್ಲ. ರಸ್ತೆ ಮಾಡಿಸುವುದಕ್ಕೆ ನಾವು ದುಡ್ಡು ಕೊಡುವುದಕ್ಕಾಗುವುದಿಲ್ಲ. ಸರ್ಕಾರವೇ ದುಡ್ಡನ್ನು ಹೊಂದಿಸಿಕೊಳ್ಳಬೇಕು. ಆದ್ದರಿಂದ, ಆದಷ್ಟು ಬೇಗ ಈ ರಸ್ತೆಯನ್ನು ಜೋಡಿ ರಸ್ತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯಿಣಿಯವರಿಗೆ ಒಪ್ಪಿಗೆಯಾಗುವಂತೆ ಉತ್ತರ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇವರಿಗೆ ಒಪ್ಪಿಗೆಯಾಗುವ ಹಾಗೆ ಉತ್ತರ ಕೊಡಬೇಕಾದರೆ ಮೊದಲು ಹಣ ಬೇಕಾಗುತ್ತದೆ. ರಸ್ತೆ ಅಗಲ ಇಲ್ಲದೇ ಇರುವುದರಿಂದ ಆಕ್ಸಿಡೆಂಟ್ ಆಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆಕ್ಸಿಡೆಂಟ್ ಆಗಿರುವುದಕ್ಕೆ ರಸ್ತೆಯ ಅಗಲವ ಕಾರಣವಲ್ಲ. ಅಜಾಗರೂಕತೆಯಿಂದ ವಾಹನವನ್ನು ನಡೆಸಿರುವುದರಿಂದ ಆಕ್ಸಿಡೆಂಟ್ ಆಗಿದೆಯೆಂದು ವರದಿ ಬಂದಿದೆ. ಜೋಡಿ ರಸ್ತೆ ನಿರ್ಮಾಣ ಮಾಡಬೇಕೆಂದು ಹಿಂದಿನಿಂದ ಕೇಳುತ್ತಿದ್ದಾರೆ ಎನ್ನುವುದು ನಿಜ. ನಂಜನಗೂಡಿನಲ್ಲೂ ಸಂಚಾರ ಜಾಸ್ತಿ ಇದೆ. ಆದರೆ, ರಸ್ತೆ ಮಾಡುವುದಕ್ಕೆ ಹಣ ಬೇಕಲ್ಲ. ಇನ್ನೂ ಸ್ವಲ್ಪ ರಸ್ತೆಯನ್ನು ಅಗಲ ಮಾಡಿ ಸರಿಪಡಿಸುವುದಕ್ಕೆ ಇಂಜಿನೀಯರ್‌ರವರಿಗೆ ಹೇಳುತ್ತೇನೆ. ತಾವೂ ಬೇಕಾದರೆ ನಮ್ಮ ಜೀಪಿನಲ್ಲಿ ಬನ್ನಿ ನಾವೂ ನೀವು ಹೋಗಿ ಅಲ್ಲಿ ನೋಡಿಕೊಂಡು ಬರೋಣ. ಜೋಡಿ ರಸ್ತೆಯನ್ನು ಮಾಡಬೇಕೆಂದು ತಾವು ಏನು ಸೂಚನೆಯನ್ನು ಕೊಟ್ಟಿದ್ದೀರೋ ಅದನ್ನು ಮಾಡಿಸುವುದಕ್ಕೆ ಸಧ್ಯಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಶ್ರೀಯುತರುಗಳಾದ ವೇದಾಂತ ಹೆಬ್ಬಿಗ, ಪಿ.ಎಂ. ಚಿಕ್ಕಬೋರಯ್ಯ, ಮತ್ತು ಬಿ.ಜಿ. ಕೊಟ್ರಪ್ಪನವರು ಗಮನ ಸೆಳೆಯುವ ಸೂಚನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ಬಂದ ಮೇಲೆ ತೆಗೆದುಕೊಳ್ಳಲಾಗುತ್ತದೆ. ನಿಮ್ಮ ಗಮನ ಸೆಳೆಯುವ ಸೂಚನೆಗೆ ಮುಖ್ಯ ಮಂತ್ರಿಯವರು ಉತ್ತರ ಕೊಡಬೇಕಾಗಿರುವುದರಿಂದ ಅದನ್ನು ಮುಂದಕ್ಕೆ ಹಾಕಲಾಗಿದೆ.

## 2) ಕಲ್ಘಟಗಿಯ ಕಾಂಗ್ರೆಸ್ ಅಧ್ಯಕ್ಷರ ಕಾರನ್ನು ಸುಟ್ಟು ಹಾಕಿರುವುದು

SRI M. MALLIKARJUNA KHARGE.—Sir, I call the attention of the Minister for Home to the burning of car belonging to District Congress President, Kalgattagi, Dharwad.

ಶ್ರೀ ಆರ್.ಎಲ್. ಜಾಲಪ್ಪ (ಗೃಹ ಸಚಿವರು).—ದಿನಾಂಕ ೧೩.೮.೮೭ರಂದು ಶ್ರೀ ಬಾಬು ಖಾಸಿಂ ಸಾಬ್‌ರವರು ಕಲಘಟಗಿ ಪೋಲೀಸ್ ಠಾಣೆಯಲ್ಲಿ ಶ್ರೀ ಎ.ಎಸ್. ಧಾವಲಿ ಮತ್ತು ಅವರ ಮಗ ಶ್ರೀ ಭೂಪಾಲ್ ಗೌಡ ಹಾಗೂ ಇನ್ನಿಬ್ಬರು ತಂಬೂರು ಗ್ರಾಮದ ಹತ್ತಿರ ನಿಲ್ಲಿಸಿದ ಕಾರಿಗೆ (ನಂಬರ್

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.